# ವಿದ್ಯಾರ್ಥಿಪ್ರಭ

## ಒಂದು ಸುಂದರ ಕನಸು

**ಸಾಯಂಕಾಲ** ಆಟಕ್ಕೆ ಹೋಗಿದ್ದ ರಮೇಶನಿಗೆ ತುಂಬ ಶ್ರಮವಾಗಿತ್ತು. ಹಾಗೆಯೇ ಸೋಫಾಕ್ಕೆ ಒರಗಿದ. ಟಿ.ವಿ.ಯಲ್ಲಿ ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಬಗ್ಗೆ ಧಾರಾವಾಹಿಯೊಂದು ಬರುತ್ತಿತ್ತು. ಅದನ್ನು ನೋಡುತ್ತಿದ್ದಂತೆಯೇ, ಒಂದು ವಿಚಿತ್ರ ಸಂಗತಿ ನಡೆಯಿತು. ಜರ್ದಾ ಮೀಸೆ ಬಿಟ್ಟು, ಟೋಪಿ ಹಾಕಿದ್ದ ಮುದುಕರೊಬ್ಬರು ಟಿ.ವಿ ಒಳಗಿನಿಂದ ಅವನನ್ನೇ ದಿಟ್ಟಿಸಿ ನೋಡುತ್ತಿದ್ದಂತೆ ಅವನಿಗೆ ಭಾಸವಾಯಿತು. ಅವರು ಅವನತ್ತಲೇ ನಡೆಯುತ್ತ ಬಂದರು.

ರಮೇಶನಿಗೆ ಏನೂ ತೋಚಲಿಲ್ಲ. ಆ ವೃದ್ಧರು ತಮ್ಮ ಗಂಭೀರ ವಾಣಿಯಿಂದ ಹೇಳತೊಡಗಿದರು:

### ದೇಶಭಕ್ತಿ ಎಂದರೇನು?

"ಮಗೂ, ಈ ದೇಶದ ಸ್ವಾತಂತ್ರ್ಯಕ್ಕಾಗಿ ಸಾವಿರಾರು ಜನ ಹೋರಾಡಿ, ತಮ್ಮ ಪ್ರಾಣವನ್ನೇ ತೆತ್ತರು. ಅವರಿಗೆ ತಮ್ಮ ಸ್ವಂತ ಸುಖಕ್ಕಿಂತಲೂ ದೇಶದ ಸ್ವಾತಂತ್ರ್ಯ ಮತ್ತು ಕಲ್ಯಾಣಗಳೇ ಮುಖ್ಯವಾಗಿದ್ದವು. ಮಗೂ, ಭಾರತ ಎಂದರೆ ಬರಿಯ ಭೂಭಾಗ ಎಂದು ತಿಳಿಯಬೇಡ. ಭಾರತ ಎಂದರೆ, ಭಾರತದ ಸಂಸ್ಕೃತಿ, ಧರ್ಮ, ಪರಂಪರೆ, ಸಮಾಜ, ಜನರು, ಭಾಷೆಗಳು, ಸಾಹಿತ್ಯ ಇತ್ಯಾದಿಗಳು ಸೇರಿ ಆಗಿರುವ ಸಮಗ್ರ ಭಾವನೆ. ಯಾರು ಮೇಲಿನವುಗಳನ್ನು ಸಹಜವಾಗಿ, ತಮ್ಮ ತಾಯಿತಂದೆಗಳನ್ನು ಪ್ರೀತಿಸುವಂತೆ ಪ್ರೀತಿಸುತ್ತಾರೋ ಅವರೇ ನಿಜವಾದ ದೇಶಭಕ್ತರು. ಆ ಪ್ರೀತಿಯೇ, **ಈ ದೇಶಕ್ಕೆ ಸಂಬಂಧಿಸಿದ್ದೆಲ್ಲವೂ ತನ್ನದೇ ಎನ್ನುವ ಭಾವನೆಯೇ ನಿಜವಾದ ದೇಶಭಕ್ತಿ.**"

### ನಮ್ಮ ದೇಶದ ಸಂಸ್ಕೃತಿ

"ನಮ್ಮ ದೇಶದ ಬಗ್ಗೆ ನಮಗೆ ಏನೂ ಗೊತ್ತಿಲ್ಲದಿದ್ದರೆ, ನಾವು ಹೇಗೆ ತಾನೆ ದೇಶಭಕ್ತರಾಗಲು ಸಾಧ್ಯ? ನಮ್ಮ ದೇಶದ ಸಂಸ್ಕೃತಿ ಜಗತ್ತಿನಲ್ಲಿಯೇ ಅತ್ಯಂತ ಪುರಾತನವಾದುದು. ವೇದಗಳು ನಮ್ಮ ದೇಶದ ಸಂಸ್ಕೃತಿಯ ಮೂಲಗಳು. ನಂತರ ರಾಮಾಯಣ ಮಹಾಭಾರತಗಳ ರಚನೆಯಾಯಿತು. ರಾಮ ಮತ್ತು ಕೃಷ್ಣರು ನಮ್ಮ ದೇಶದ ಶ್ರೇಷ್ಠ ಆದರ್ಶ ಪುರುಷರು. ನಮ್ಮ ದೇಶದ ಸಂಸ್ಕೃತಿಯಲ್ಲಿನ ಎಲ್ಲ ಒಳ್ಳೆಯ ಅಂಶಗಳನ್ನೂ ಅವರ ಜೀವನದಲ್ಲಿ ನೋಡಬಹುದು. ಅದೇ ರೀತಿ ನಮ್ಮಲ್ಲಿ ಅನೇಕ ಮಹಾಪುರುಷರು ಆಗಿಹೋಗಿದ್ದಾರೆ. ಅವರೆಲ್ಲ ಕಾಲಕಾಲಕ್ಕೆ ಈ ದೇಶದ ಜನರನ್ನು ಎಚ್ಚರಿಸುವ ಮಹಾನ್ ಕಾರ್ಯವನ್ನು ಮಾಡಿದ್ದಾರೆ."

"ನಮ್ಮ ಋಷಿಮುನಿಗಳು ಜಗತ್ತಿನಲ್ಲಿಯೇ ಅತ್ಯಂತ ಉನ್ನತ ಬುದ್ಧಿಶಕ್ತಿಯನ್ನು ಹೊಂದಿದ್ದರು. ಅದಕ್ಕೆ ಉಪನಿಷತ್ತುಗಳೇ ಸಾಕ್ಷಿ. ಎಲ್ಲವನ್ನೂ ವಿಚಾರ ಮಾಡಿ, ಪ್ರಶ್ನಿಸಿ ತಿಳಿದುಕೊಳ್ಳಬೇಕು ಎಂಬ ವೈಜ್ಞಾನಿಕ ಮನೋಭಾವವನ್ನು ಅವರು ಬೆಳೆಸಿಕೊಂಡಿದ್ದರು. ನಮ್ಮ ದೇಶದಲ್ಲಿ, ಖಗೋಳಶಾಸ್ತ್ರ, ಭೌತಶಾಸ್ತ್ರ, ಗಣಿತ, ವೈದ್ಯಶಾಸ್ತ್ರ – ಮುಂತಾದವು ಬಹಳ ಹಿಂದೆಯೇ ಅಭಿವೃದ್ಧಿ ಹೊಂದಿದ್ದವು."

"ಸಂಸ್ಕೃತ ಭಾಷೆ ನಮ್ಮ ದೇಶದ ಎಲ್ಲಾ ಭಾಷೆಗಳ ತಾಯಿ. ಸಂಸ್ಕೃತ ಭಾಷೆಯಲ್ಲಿ ಅನೇಕ ಪ್ರಕಾರದ ಸಾಹಿತ್ಯ ಗ್ರಂಥಗಳು ರಚನೆಯಾಗಿವೆ. ಕಾಳಿದಾಸ ಸಂಸ್ಕೃತ ಸಾಹಿತ್ಯದ ಶಿರೋಮಣಿ. ಅದಲ್ಲದೆ, ಹಿಂದಿ, ಕನ್ನಡ, ತಮಿಳು, ತೆಲುಗು, ಮಲೆಯಾಳಂ ಮುಂತಾದ ಹಲವು ಭಾರತೀಯ ಭಾಷೆಗಳಲ್ಲಿ ಬಹಳ ಉತ್ತಮ ಸಾಹಿತ್ಯರಾಶಿಯನ್ನು ನಾವು ಕಾಣಬಹುದು."

"ಮಗೂ, ನಮ್ಮ ದೇಶದ ಪುರಾತನರು ಶಿಲ್ಪಕಲೆಯಲ್ಲಿಯೂ ನಿಸ್ಸೀಮರು. ಅನೇಕ ದೇವಾಲಯಗಳು ಅದಕ್ಕೆ ಸಾಕ್ಷಿ. ನಮ್ಮ ರಾಜ್ಯದಲ್ಲಿಯೇ ಶಿಲ್ಪಕಲೆಯ ಸೌಂದರ್ಯವನ್ನು ನಾವು ಅದೆಷ್ಟು ಕಡೆ ನೋಡಬಹುದು! ಬೇಲೂರು, ಹಳೇಬೀಡು, ಶ್ರವಣಬೆಳಗೊಳ, ಸೋಮನಾಥಪುರ, ಹಂಪಿ, ಬಾದಾಮಿ, ಐಹೊಳೆ, ಪಟ್ಟದಕಲ್ಲು – ಒಂದೇ ಎರಡೇ!"

" ಭಾರತೀಯರ ಸಾಧನೆಗಳು ಇನ್ನೂ ಅನೇಕ ಇವೆ, ಇವುಗಳಿಗಾಗಿ ನಾವು ಅಭಿಮಾನ ಪಡಬೇಕು. ತಮ್ಮ ತಾಯಿಯನ್ನು ನಾವು ಪ್ರೀತಿಸುವುದಿಲ್ಲವೇ? ಅದರಂತೆ **ನಮ್ಮ ದೇಶವನ್ನೂ, ನಮ್ಮ ದೇಶದ ಸಂಸ್ಕೃತಿಯನ್ನೂ ನಾವು ಗಾಢವಾಗಿ ಪ್ರೀತಿಸಬೇಕು. ಅದನ್ನು ರಕ್ಷಿಸಲು, ಮುಂದುವರಿಸಿಕೊಂಡು ಹೋಗಲು ಪಣತೊಡಬೇಕು. ಆಗ ಮಾತ್ರ ನಾವು ನಿಜವಾದ ದೇಶಭಕ್ತರು ಅನ್ನಿಸಿಕೊಳ್ಳುತ್ತೇವೆ.**"

### ದೇಶಭಕ್ತಿಯ ಲಕ್ಷಣಗಳು

"ಮಗೂ, ದೇಶಕ್ಕಾಗಿ ಸೇವೆ ಮಾಡುವುದೇ ದೇಶಭಕ್ತಿಯ ಲಕ್ಷಣ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕಿಂತ ಮುಂಚೆ, ಸ್ವಾತಂತ್ರ್ಯಕ್ಕಾಗಿ ಹೋರಾಡುವುದೇ ದೇಶಸೇವೆ ಎಂದೆನಿಸಿತ್ತು. ಈಗ ನಾವು ಮಾಡಬೇಕಾದ ದೇಶಸೇವೆ ಯಾವುದು ಗೊತ್ತೇ? ಈ ದೇಶದಲ್ಲಿ ಲಕ್ಷಾಂತರ ಮಂದಿ ಬಡವರಿದ್ದಾರೆ. ಲಕ್ಷಾಂತರ ಮಂದಿ ಅವಿದ್ಯಾವಂತರಿದ್ದಾರೆ. ಇನ್ನೂ ಲಕ್ಷಾಂತರ ಮಂದಿ, ಹಲವಾರು ರೋಗಗಳಿಂದ ನರಳುತ್ತಿದ್ದಾರೆ. ಅವರಿಗೆಲ್ಲ, ಒಳ್ಳೆಯ ಬಾಳು ಬಾಳಲು ಬೇಕಾದ ಹಣ, ವಿದ್ಯೆ ಮತ್ತು ಆರೋಗ್ಯಗಳು ಇಲ್ಲ. ಅಂಥವರಿಗೆ ಕೈಲಾದಷ್ಟು ಸೇವೆ ಮಾಡುವುದೇ ನಿಜವಾದ ದೇಶಸೇವೆ. **ಭಾರತಮಾತೆಯ ಮಕ್ಕಳ ಸೇವೆ ಮಾಡುವುದೇ ಭಾರತದೇಶದ ಸೇವೆ.**

"ಆದರೆ ಈ ಸೇವೆಯಲ್ಲಿ ಸ್ವಾರ್ಥ ಇರಬಾರದು, ಅಹಂಕಾರ ಇರಬಾರದು, ಕಪಟ ಇರಬಾರದು. ತಾನು ಮಾಡುವ ಸೇವೆ ದೇವರ ಸೇವೆ, ಭಾರತಮಾತೆಯೇ ದೇವರು ಎಂಬ ಆರಾಧನಾ ಮನೋಭಾವ ಇರಬೇಕು. ನಿನಗೆ ಸೇವೆ ಮಾಡಲು ಅವಕಾಶ ದೊರೆತದ್ದಕ್ಕಾಗಿ ನೀನು ಭಗವಂತನಿಗೆ ಕೃತಜ್ಞನಾಗಿರಬೇಕು."

ಮಗೂ, ಅಮೆರಿಕದ ಅಧ್ಯಕ್ಷನಾಗಿದ್ದ ಜಾನ್ ಎಫ್. ಕೆನೆಡಿಯ ಮಾತು ಇದು: **"ನಿನ್ನ ರಾಷ್ಟ್ರ ನಿನಗೇನು ನೀಡುತ್ತದೆ ಎಂದು ಚಿಂತಿಸಬೇಡ. ನೀನು ನಿನ್ನ ದೇಶಕ್ಕೆ ಕೊಡುವ ಕೊಡುಗೆ ಏನು ಎನ್ನುವುದರ ಬಗ್ಗೆ ಚಿಂತಿಸು"** – ಇದೇ ನಿಜವಾದ ದೇಶಭಕ್ತಿ.

### ದೇಶಭಕ್ತಿಯ ಆದರ್ಶ

ಮಗೂ, ನಾನು ನಿನಗೊಂದು ಚಿಕ್ಕ ಕತೆ ಹೇಳುತ್ತೇನೆ. ರಾಮ ರಾವಣನನ್ನು ಕೊಂದ. ಲಂಕಾನಗರವನ್ನು ಪ್ರವೇಶಿಸಿದ. ಲಂಕಾನಗರ

ಅತ್ಯಂತ ಸುಂದರವಾದ, ಸಂಪದ್ಭರಿತವಾದ ನಗರ. ಅದನ್ನು ಕಂಡು ಜತೆಯಲ್ಲಿದ್ದ ಲಕ್ಷ್ಮಣನಿಗೆ ಒಂದು ಯೋಚನೆ ಬಂದಿತು. ಅವನು ಹೇಳಿದ: "ಅಣ್ಣಾ, ಅಯೋಧ್ಯೆಯನ್ನು ಭರತ ಆಳುತ್ತಿದ್ದಾನೆ. ಅದನ್ನು ಅವನು ನಮಗೆ ಬಿಟ್ಟುಕೊಡುವನೋ ಇಲ್ಲವೋ. ಈ ಲಂಕೆಯೇ ಚೆನ್ನಾಗಿದೆ. ಇಲ್ಲಿಯೇ ಇದ್ದುಬಿಡೋಣ." ಇದಕ್ಕೆ ರಾಮ ಹೀಗೆ ಉತ್ತರಿಸಿದ:

ಅಪಿ ಸ್ವರ್ಣಮಯೀ ಲಂಕಾ ನ ಮೇ ಲಕ್ಷ್ಮಣ ರೋಚತೇ ।
ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ ॥

"ಲಕ್ಷ್ಮಣ, ಲಂಕೆಯು ಚಿನ್ನದಿಂದ ಕೂಡಿರಬಹುದು. ಆದರೂ ನನಗೆ ಅದು ಹಿಡಿಸುವುದಿಲ್ಲ. ಏಕೆ ಗೊತ್ತೆ? ಜನ್ಮ ನೀಡಿದ ತಾಯಿ, ಹುಟ್ಟಿದ ಜನ್ಮಭೂಮಿ – ಇವು ಸ್ವರ್ಗಕ್ಕಿಂತಲೂ ಶ್ರೇಷ್ಠವಾದುವು."

ಇನ್ನೊಂದು ಪ್ರಸಂಗ ಸ್ವಾಮಿ ವಿವೇಕಾನಂದರ ಜೀವನದಲ್ಲಿ ಬರುತ್ತದೆ. ಅವರು ಅಮೆರಿಕೆಯಲ್ಲಿ ಜಯಭೇರಿ ಬಾರಿಸಿ ಭಾರತಕ್ಕೆ ವಾಪಸ್ಸು ಬಂದಾಗ, ಒಬ್ಬರು ಅವರನ್ನು ಕೇಳಿದರು: "ಸ್ವಾಮೀಜಿ, ನೀವು ನಾಲ್ಕು ವರ್ಷಗಳ ಕಾಲ ಪಾಶ್ಚಾತ್ಯದೇಶಗಳಲ್ಲಿ ವಾಸ ಮಾಡಿದ್ದಿರಿ. ಈಗ ಭಾರತದ ಬಗ್ಗೆ ನಿಮಗೆ ಏನು ಅನ್ನಿಸುತ್ತದೆ?" ಅದಕ್ಕೆ ಸ್ವಾಮೀಜಿ ಉತ್ತರಿಸಿದರು: "ನಾನು ಹೊರದೇಶಗಳಿಗೆ ಹೋಗುವ ಮುಂಚೆ ಭಾರತವನ್ನು ಪ್ರೀತಿಸುತ್ತಿದ್ದೆ. ಈಗ ಅದರ ನೆಲದ ಕಣಕಣವೂ ಪವಿತ್ರ ಎಂದು ನನಗೆ ಗೊತ್ತಾಗಿದೆ."

"ಸ್ವಾಮಿ ವಿವೇಕಾನಂದರು ಹೇಳಿದ್ದಾರೆ: "ನಮಗೆ ಬೇಕಾಗಿರುವುದು ಎಲ್ಲವನ್ನೂ ತ್ಯಾಗಮಾಡಿ ದೇಶಕ್ಕಾಗಿ ತಮ್ಮ ಜೀವವನ್ನೇ ಅರ್ಪಿಸುವಂತಹ ಕೆಲವು ಮಂದಿ ಯುವಕರು." ಮಗೂ ಅಂತಹ ಯುವಕ ನೀನಾಗುತ್ತೀಯಾ? ನಿನ್ನ ದೇಶಬಾಂಧವರ ಕಷ್ಟನಷ್ಟಗಳನ್ನು ಕಂಡು ನಿನ್ನ ಕರುಣೆ ಉಕ್ಕಿ ಬರುತ್ತದೆಯೇ? ನಿನ್ನ ದೇಶಕ್ಕಾಗಿ ದುಡಿಯಲು ಸಿದ್ಧನಾಗಿದ್ದೀಯಾ?"

ಒಡನೆಯೆ ಧಡಕ್ ಎಂದು ಶಬ್ದವಾಯಿತು. ಕಣ್ಣು ಬಿಟ್ಟ ರಮೇಶನಿಗೆ ಕಾಣಿಸಿದ್ದು, ಅವನ ತಾಯಿ. ಬಾಗಿಲು ತೆಗೆದು ಒಳಕ್ಕೆ ಬಂದವರೇ "ಸಾಯಂಕಾಲವೇ ನಿದ್ದೆ ಮಾಡುತ್ತೀಯಾ? ಹೋಗು, ಓದಿಕೋ, ಪರೀಕ್ಷೆ ಸಮಯ ಹತ್ತಿರ ಬಂದಿದೆ" ಎಂದರು. ರಮೇಶನ ಕನಸೇನೋ ಮುಗಿಯಿತು. ಆದರೆ ಅದರಲ್ಲಿ ಕಲಿತ ದೇಶಭಕ್ತಿಯ ಪಾಠ ಅವನ ಮನಸ್ಸಿನಲ್ಲಿ ಹಚ್ಚಹಸುರಾಗಿ ನಿಂತಿತು.

**ಈ ಪ್ರಶ್ನೆಗಳಿಗೆ ನೀವೇ ಉತ್ತರ ಕಂಡುಕೊಳ್ಳಿ: ೧. ದೇಶಭಕ್ತಿ ಎಂದರೇನು? ೨. ನಿಜವಾದ ದೇಶಭಕ್ತರಾಗಲು ಏನು ಮಾಡಬೇಕು? ೩.ನಮ್ಮ ದೇಶದ ಸಂಸ್ಕೃತಿಯ ಕೆಲವು ವೈಶಿಷ್ಟ್ಯಗಳು ಯಾವುವು? ೪. ದೇಶಭಕ್ತಿಯ ಲಕ್ಷಣಗಳು ಯಾವುವು? ೫. ದೇಶಭಕ್ತಿಯ ಎರಡು ನಿದರ್ಶನಗಳನ್ನು ಕೊಡಿ.**

**(ಮುಂದಿನ ತಿಂಗಳು ಕಲಿಯುವ ಗುಣ: *ಧರ್ಮ ಸಾಮರಸ್ಯ* )**

**(ಬರಹ: *ಸಂ.*)**

---

## ದಿವ್ಯಸ್ಮೃತಿಪ್ರಭ

(ದಿವ್ಯತ್ರಯರು, ಅವರ ಶಿಷ್ಯರು ಮತ್ತು ರಾಮಕೃಷ್ಣ ಮಹಾಸಂಘದ ಕೆಲವು ಜ್ಯೇಷ್ಠ ಯತಿಗಳ ದಿವ್ಯಸ್ಮೃತಿಗಳ ಸಂಕಲನವನ್ನು ಈ ಅಂಕಣ ಹೊಂದಿರುತ್ತದೆ.– ಸಂ.)

ಸ್ವಾಮಿ ಬ್ರಹ್ಮಾನಂದರು: ಒಂದು ದಿನ ಸ್ವಾಮಿ ಬ್ರಹ್ಮಾನಂದರು ಗಂಗೇಶಾನಂದ ಎಂಬ ಕಿರಿಯ ಸ್ವಾಮಿಗಳನ್ನು ಕರೆದು ಸ್ವಲ್ಪ ಗಂಗಾಜಲವನ್ನು ತರಲು ತಿಳಿಸಿದರು. ಅವರಿಂದ ಗಂಗಾಜಲವನ್ನು ತೆಗೆದುಕೊಂಡು, ತಮ್ಮ ಶರೀರದ ಮೇಲೆ ಸ್ವಲ್ಪ ಚಿಮುಕಿಸಿಕೊಂಡರು. ನಂತರ ಅವರಿಗೆ ಸೇವೆ ಮಾಡುತ್ತಿದ್ದ ಸ್ವಾಮಿ ನಿರ್ವಾಣಾನಂದರನ್ನು ಕರೆದು, ಕಪಾಟಿನಲ್ಲಿದ್ದ ಒಂದು ಪುಸ್ತಕವನ್ನು ತರಿಸಿದರು. ನಂತರ ಅದನ್ನು ಓದಲು ಕುಳಿತರು. ಆದರೆ ಓದುವ ಬದಲಾಗಿ, ಆ ಪುಸ್ತಕವನ್ನೇ ಸ್ವಲ್ಪ ಹೊತ್ತು ದಿಟ್ಟಿಸುತ್ತ, ಕಣ್ಣು ಮುಚ್ಚಿ ಧ್ಯಾನಸ್ಥರಾದರು. ಸ್ವಲ್ಪ ಹೊತ್ತಾದ ನಂತರ ಆ ಪುಸ್ತಕವನ್ನು ಸ್ವಸ್ಥಾನದಲ್ಲಿ ಇಡುವಂತೆ ಹೇಳಿದರು.

ಸ್ವಾಮಿ ಗಂಗೇಶಾನಂದರಿಗೆ ಆ ಪುಸ್ತಕ ಯಾವುದಿರಬಹುದು ಎಂಬ ಕುತೂಹಲ. ತೆಗೆದು ನೋಡಿದಾಗ ಅವರಿಗೆ ಅತ್ಯಾಶ್ಚರ್ಯವಾಯಿತು. ಅದು ಅಮೆರಿಕೆಯ ಚಿಂತಕ, ಎಮರ್‌ಸನ್‌ನ ಪ್ರಬಂಧಗಳ ಪುಸ್ತಕವಾಗಿತ್ತು. ಇದನ್ನು ಏಕೆ ಇಷ್ಟೊಂದು ಗೌರವದಿಂದ ಕಂಡರು ಎಂದುಕೊಳ್ಳುತ್ತ, ಮೊದಲ ಪುಟ ತೆಗೆದಾಗ, ಇದರ ರಹಸ್ಯ ಅರ್ಥವಾಯಿತು. ಅದರಲ್ಲಿ ಹೀಗೆ ಬರೆದಿತ್ತು: "ಪ್ರೀತಿಯಿಂದ, ಬ್ರಹ್ಮಾನಂದರಿಗೆ." ಅದರ ಕೆಳಗೆ ಸ್ವಾಮಿ ವಿವೇಕಾನಂದರ ಸಹಿ ಇತ್ತು. ಸ್ವಾಮೀಜಿ ಕೊಟ್ಟ ಪುಸ್ತಕವನ್ನೇ ಇಷ್ಟೊಂದು ಗೌರವದಿಂದ ಕಾಣುತ್ತಿದ್ದ ಸ್ವಾಮಿ ಬ್ರಹ್ಮಾನಂದರು, ಸ್ವಾಮಿ ವಿವೇಕಾನಂದರನ್ನು ಅದೆಷ್ಟು ಗೌರವಿಸುತ್ತಿದ್ದರು? ಅದು ಊಹಿಸಲೂ ಆಗದ ವಿಷಯ.

**ಸಾವನ್ನು ಸ್ವಾಗತಿಸಿದ ಸಂನ್ಯಾಸಿಗಳು :** ಶ್ರೀಮಾತೆ ಶಾರದಾದೇವಿಯರು ಹೇಳುತ್ತಿದ್ದರು, "ಸಾವನ್ನು ಹೇಗೆ ಎದುರಿಸಬೇಕು ಎಂಬ ಕಲೆಯನ್ನು ಕಲಿತುಕೊಳ್ಳಬೇಕು." ಬಹಳಷ್ಟು ಜನ ಸಾವಿಗೆ ಹೆದರುತ್ತಾರೆ. ಆದರೆ ಕೆಲವು ಧೀರಪುರುಷರು ಸಾವನ್ನು ಅತಿ ಧೈರ್ಯದಿಂದ ಎದುರಿಸುತ್ತಾರೆ. ರಾಮಕೃಷ್ಣ ಮಹಾಸಂಘದ ಕೆಲವರು ಸಂನ್ಯಾಸಿಗಳು ಮೃತ್ಯುವನ್ನು ಹೇಗೆ ಸ್ವಾಗತಿಸಿದರು ಎನ್ನುವುದನ್ನು ನೋಡೋಣ.

ಬ್ರಹ್ಮಚಾರಿ ಜ್ಞಾನ್ ಮಹಾರಾಜ್, ಸ್ವಾಮಿ ವಿವೇಕಾನಂದರ ಶಿಷ್ಯರು. ಅವರು ಸ್ವಾಮಿ ವಿವೇಕಾನಂದರ ಆದೇಶದ ಮೇರೆಗೆ ನೈಷ್ಠಿಕ ಬ್ರಹ್ಮಚರ್ಯ ವ್ರತವನ್ನು ಕೈಗೊಂಡಿದ್ದರು. ಸ್ವಾಮಿ ವಿವೇಕಾನಂದರ ಶಿಷ್ಯರಲ್ಲೆಲ್ಲ, ತುಂಬ ವರ್ಷ ಕಾಲ ಬದುಕಿದ್ದವರೆಂದರೆ ಇವರೇ. ತುಂಬ ವಯಸ್ಸಾಗಿದ್ದರಿಂದ, ಅವರ ಆರೋಗ್ಯವೂ ಅಷ್ಟು ಸರಿಯಿರಲಿಲ್ಲ. ಆದರೆ ಅವರು ಹೇಳುತ್ತಿದ್ದರು: "ನನ್ನ ಗುರುದೇವರ (ಸ್ವಾಮಿ ವಿವೇಕಾನಂದರ) ಜನ್ಮ ಶತಾಬ್ದಿಯನ್ನು ನೋಡುವವರೆಗೆ ಈ ದೇಹ ಹೋಗುವುದಿಲ್ಲ." ಹಾಗೆಯೇ ಆಯಿತು. ೧೯೬೩ ರ ಜನವರಿಯಲ್ಲಿ, ಸ್ವಾಮಿ ವಿವೇಕಾನಂದರ ಜನ್ಮಶತಾಬ್ದಿ ಸಮಾರಂಭಗಳು ಜರುಗಿದವು. ನಂತರ ಕೆಲವೇ ದಿವಸಗಳಲ್ಲಿ, ಅವರ ಆರೋಗ್ಯ ಹದಗೆಡಲಾರಂಭಿಸಿತು. ಒಂದು ದಿನ ಅವರನ್ನು ಪರೀಕ್ಷಿಸಿದ ವೈದ್ಯರು, "ಇವರ ಆರೋಗ್ಯ ತುಂಬ ಕೆಟ್ಟಿದೆ. ಬಹುಶಃ ಇನ್ನು ಹೆಚ್ಚು ಕಾಲ ಅವರು ಬದುಕಿರಲಾರರು" ಎಂದರು. ಅದನ್ನು ಕೇಳಿ ಬಹಳ ಸಂನ್ಯಾಸಿಗಳು ಬ್ರಹ್ಮಚಾರಿಗಳು ಅವರನ್ನು ನೋಡಲು ಬಂದರು. ಅವರನ್ನೆಲ್ಲ ನೋಡಿ, ಜ್ಞಾನ್ ಮಹಾರಾಜರು ಜೋರಾಗಿ ನಗುತ್ತ ಹೇಳಿದರು: **"ಓಹೋ! ಯಾರೋ ಸಾಯುತ್ತಿದ್ದಾರೆ ಎಂದು ಈ ತಮಾಷೆ ನೋಡಲು ಇಷ್ಟೊಂದು ಜನ ಸೇರಿದ್ದೀರಾ"** ಎಂದು ಹೇಳಿ, ನಗುನಗುತ್ತ ಅವರು ಪ್ರಾಣಬಿಟ್ಟರು. (ಮುಂದಿನ ತಿಂಗಳು: *ಈ ಬಗ್ಗೆ ಮತ್ತಷ್ಟು ನೆನಪುಗಳು*)

**(ಸಂಗ್ರಹ: ಸ್ವಾಮಿ ರಾಘವೇಶಾನಂದ)**